ಕಥೆ

# ಗುಂಡು ಹೊಡೆದಿರಾ



**ಮೊಗಳ್ಳಿ ಗಣೇಶ್**

ಕಲೆ: ಸಂತೋಷ್ ಸಸಿಹಿತ್ಲು

ಪರಮಾನಂದ ಒಳ್ಳೆಯ ಗೆಳೆಯ. ಎಲ್ಲ ತರದ ಜನರ ಜೊತೆಯೂ ಆತನಿಗೆ ಸಂಬಂಧಗಳಿದ್ದವು. ಆದರೆ ಅವನು ಮೂಲತಃ ಪತ್ರಕರ್ತ ಹಾಗೂ ಪ್ರಗತಿಪರ. ಒಂದು ಸಮಾಜದಲ್ಲಿ ಎಲ್ಲರೂ ಇರುತ್ತಾರೆ. ಒಳ್ಳೆಯದು ಕೆಟ್ಟದ್ದು ಎಲ್ಲೊ ಮೇಲಿನಿಂದ ಬಂದು ಬೀಳುವುದಿಲ್ಲ ಅಥವಾ ಹುಟ್ಟಿನಿಂದಲೆ ಪಡಕೊಂಡು ಬಂದಿರುವುದಿಲ್ಲ ಎಂಬ ಉದಾರವಾದಿ. ಒಂದು ದಿನ ಬಂದ. 'ಯಾರದೊ ಒಬ್ಬರ ಜೊತೆ ಒಂದು ಡಿನ್ನರ್ ಫಿಕ್ಸ್ ಮಾಡ್ತೀನಿ; ನೀನಾಗ ಮಿಸ್ ಮಾಡದೆ ಬರಬೇಕು' ಎಂದು ಮೊದಲೇ ಹಲವು ಸಲ ಹೇಳಿದ್ದ. ಒಂದೆರಡು ಬಾರಿ ತಪ್ಪಿಸಿಕೊಂಡಿದ್ದೆ. ಪರಮಾನಂದನ ಜೊತೆ ಪಾರ್ಟಿ ಮಾಡುವುದು ಸುಲಭ ಅಲ್ಲ. ಪ್ರಪಂಚದಲ್ಲೇ ಅಪರೂಪವಾದವರಲ್ಲಿ ಅಪರೂಪದವರ ಜೊತೆ ಗುಂಡು ಪಾರ್ಟಿ ಏರ್ಪಡಿಸುತ್ತಿದ್ದ. ಅದೇ ಬಾರಿ ಕಷ್ಟವಾಗುತ್ತಿದ್ದುದು. ಇಂತಿಂತಹ ಶ್ರೀಮಂತ ಹುಚ್ಚರ ಸ್ನೇಹವನ್ನು ಈತ ಹೇಗೆ ಸಂಪಾದಿಸಿದ ಎಂಬುದೆ ತಿಳಿಯುತ್ತಿರಲಿಲ್ಲ. ಆ ಪಾರ್ಟಿಗಳ ಆ ಗಣ್ಯರ ವರ್ತನೆಗಳೊ ಊಹೆ ಮೀರಿದ್ದವು. ಅವರ ನಡತೆಗೂ ನಮಗೂ ಯಾವ ಸಂಬಂಧಗಳು ಕಾಣದೆ ಅಸಂಗತ ವೈರಾಗ್ಯ ಮೂಡಿಬಿಡುತ್ತಿತ್ತು. ಶ್ರೀಮಂತರೆಂದರೆ ಶೋಷಕರು ಎಂಬ ನಮ್ಮ ನಿಲುವೇ ಉಲ್ಟಾ ಆಗಿಬಿಡುತ್ತಿತ್ತು. ಅಂತಹ ಕೋಟ್ಯಧಿಪತಿಗಳು ಬಡವರಿಗಿಂತಲೂ ಕಡೆಯಾಗಿ ಬದುಕುತ್ತಿದ್ದಾರೇನೊ... ಅಯ್ಯೋ ಪಾಪ ಇವರು ಸ್ನಾನ ಮಾಡಿಯೆ ತಿಂಗಳಾಗಿರಬೇಕು ಎನಿಸಿ ತಲೆ ಕೆಡುತ್ತಿತ್ತು. ಆದರೆ ಅವರ ಆಸ್ತಿ ಪಾಸ್ತಿಯ ವಹಿವಾಟು, ರಾಜಕೀಯ ನಂಟೊ ಭಯಾನಕವಾಗಿತ್ತು. ಪರಮಾನಂದ ಪತ್ರಕರ್ತನಾದ್ದರಿಂದ ಅವರ ಒಳಜಗತ್ತಿನ ಐಲುಗಳ ಬಗ್ಗೆ ಚೆನ್ನಾಗಿ ತಿಳಿದಿದ್ದ.

ಅಂತೂ ಒಬ್ಬ ಪ್ರಖ್ಯಾತ ರಿಯಲ್ ಎಸ್ಟೇಟ್

